ಬಾರ್ಡರ್ ಡಿಸ್ಟ್ರಿಕ್ಟ್, ಗುಲ್ಬರ್ಗಾ ಸಹಿತ ಬಾರ್ಡರ್ ಡಿಸ್ಟ್ರಿಕ್ಟ್ ಆಗಿದೆ. ಆದುದರಿಂದ ದಯಮಾಡಿ ಇಲ್ಲಿ ಉತ್ತರ ಕರ್ನಾಟಕದ ಭಾಗಕ್ಕೆ ಅನ್ಯಾಯವಾಗಿದೆ. ಇದನ್ನು ಸರಿ ಮಾಡಬೇಕಾಗುತ್ತದೆಂಬ ಮಾತನ್ನು ಹೇಳಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಬೋಸರಾಜ್‌ರವರು ಹೇಳಿದಂತಹ ವಿಚಾರದ ಬಗ್ಗೆ ನಾವು ಸಿ.ಆರ್.ಎಫ್.ನಲ್ಲಿ ಇವರ ಕ್ಷೇತ್ರದಲ್ಲಿ 3 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅವರು ಬೇಕಾದರೆ ದಾಖಲೆಗಳನ್ನು ತೆಗೆದು ನೋಡಲಿ, ನಾನು ಸಚಿವನಾದ ಮೇಲೆ ಈಗ 20 ತಿಂಗಳಲ್ಲಿ 3 ಕೋಟಿ ರೂಪಾಯಿಗಳನ್ನು ಕೊಟ್ಟಿರುವಂಥಾದ್ದು, ಬೇಕಾದರೆ ತಾವು ದಾಖಲೆಗಳನ್ನು ನೋಡಿ. ಅದೇ ರೀತಿಯಲ್ಲಿ ಶ್ರೀ ಜೆ. ನರಸಿಂಹಸ್ವಾಮಿ ಯವರಿಗೆ ದೊಡ್ಡಬಳ್ಳಾಪುರಕ್ಕೆ ಸಿ.ಆರ್.ಎಫ್.ಫಂಡ್‌ನಲ್ಲಿ ಎಷ್ಟು ಕೊಟ್ಟಿದ್ದೇವೆಂದು ನೋಡಿ. ನಾನು ಹೇಳುವಂಥಾದ್ದು ಈ ಸಾರಿ ಬಿ.ಜೆ.ಪಿ. ಶಾಸಕರದ್ದು ಇಲ್ಲ, ಅದನ್ನು ಸರಿಪಡಿಸುವ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ಅವತ್ತು ಅನ್ಯಾಯವಾಗಿದ್ದು ಬಿಜೆಪಿಯವರಿಗೆ ಮಾತ್ರ, ನಮಗೆ ಮಾತ್ರ ಅನ್ಯಾಯ ಆಗಿದ್ದು.

ಶ್ರೀ ಹಂಪನಗೌಡ ಬಾದರ್ಲಿ : ಮಾನ್ಯ ಸಚಿವರೆ, ಹಾಸನ ಜಿಲ್ಲೆಗೆ ಎಷ್ಟು ಕೊಟ್ಟಿದ್ದೀರೆಂದು ದಯವಿಟ್ಟು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ : ನಾನು ಹಾಸನ ಜಿಲ್ಲೆದು ಹೇಳುತ್ತಿಲ್ಲವೇ.

ಅಧ್ಯಕ್ಷರು : ಆಯಿತು.

(ಗೊಂದಲ)

ಅಧ್ಯಕ್ಷರು : ಈ ರೀತಿ ಗೊಂದಲ ಮಾಡಿಕೊಳ್ಳಬೇಡಿ, ಪ್ರಶ್ನೋತ್ತರ ವೇಳೆಯಲ್ಲಿ ದಯಮಾಡಿ, ವಿಷಯಗಳು ಚರ್ಚೆಯಾಗಬೇಕು. ಅದು ಯಾವುದಾದರೂ ವಿಚಾರದ ಬಗ್ಗೆ ವಿಶೇಷವಾಗಿ ಚರ್ಚೆಯಾಗಬೇಕೆಂದರೆ, ನಾನು ನೋಟೀಸ್ ಕೊಟ್ಟರೆ, ಅವಕಾಶವನ್ನು ಕೊಡುತ್ತೇನೆ. ಈಗ ಶ್ರೀ ಸಿ.ಟಿ. ರವಿಯವರು ಪ್ರಶ್ನೆಯನ್ನು ಕೇಳಿ.

ವಿಷಯ : ಚಿಕ್ಕಮಗಳೂರು ಜಿಲ್ಲೆಯಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಅನುದಾನ ಒದಗಿಸಿರುವ ಬಗ್ಗೆ

213(1231) ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) : ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರಸಕ್ತ ಸಾಲಿನಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಒದಗಿಸಿರುವ ಅನುದಾನ ಎಷ್ಟು?

ಆ) ರಾಜ್ಯದಲ್ಲಿ ಎಷ್ಟು ಜಿಲ್ಲೆಗಳಿಗೆ ಹಾಗೂ ತಾಲ್ಲೂಕುಗಳಿಗೆ ಕ್ರೀಡಾಂಗಣ ನಿರ್ಮಾಣ ಮಾಡುವುದಕ್ಕೆ ಆಯ್ಕೆ ಮಾಡಲಾಗಿದೆ (ವಿವರ ನೀಡುವುದು)

ಇ) ಚಿಕ್ಕಮಗಳೂರು ಜಿಲ್ಲೆಯ ಯಾವ ಸ್ಥಳಗಳಲ್ಲಿ ಹೊಸ ಕ್ರೀಡಾಂಗಣ ನಿರ್ಮಿಸಲು ಸರ್ಕಾರ ಯೋಚಿಸಿದೆ?

ಶ್ರೀ ಹನುಮಂತಪ್ಪ ವೈ. ಆಲ್ಕೋಡ್ (ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು) :

ಅ) ಪ್ರಸಕ್ತ ಸಾಲಿನಲ್ಲಿ ಕ್ರೀಡಾಂಗಣ ನಿರ್ಮಾಣ ಕಾಮಗಾರಿಗಳಿಗೆ 12ನೇ ಹಣಕಾಸು ಆಯೋಗದ ಅನುದಾನದಿಂದ ರೂ. 21.30 ಕೋಟಿಯನ್ನು ಒದಗಿಸಲಾಗಿದೆ.

ಆ) ಪ್ರಸಕ್ತ ಸಾಲಿನಲ್ಲಿ ಯಾವುದೇ ಜಿಲ್ಲಾ ಕ್ರೀಡಾಂಗಣ ನಿರ್ಮಾಣ ಮಾಡಲು ಆಯ್ಕೆ ಮಾಡಿರುವುದಿಲ್ಲ, ಆದರೆ 63 ತಾಲ್ಲೂಕು ಮಟ್ಟದ ಕ್ರೀಡಾಂಗಣಗಳ ನಿರ್ಮಾಣ ಕಾಮಗಾರಿಗಳನ್ನು 12ನೇ ಹಣಕಾಸು ಆಯೋಗದ ಮೊದಲನೇ ಹಂತದ ಯೋಜನೆಯ ಆಯವ್ಯಯದಲ್ಲಿ ಕೈಗೆತ್ತಿಕೊಳ್ಳಲು ಯೋಜಿಸಿದೆ.

ಇ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಮೂಡಿಗೆರೆ, ಕಡೂರು, ನರಸಿಂಹರಾಜಪುರ ತಾಲ್ಲೂಕುಗಳಲ್ಲಿ ಕ್ರೀಡಾಂಗಣ ಕಾಮಗಾರಿ ಪೂರ್ಣಗೊಂಡಿದೆ. 12ನೇ ಹಣಕಾಸು ಆಯೋಗದ ಧನಸಹಾಯದ ಮುಂದಿನ ಹಂತಗಳಲ್ಲಿ ಶೃಂಗೇರಿ, ಕೊಪ್ಪ, ತರೀಕೆರೆ ತಾಲ್ಲೂಕುಗಳಲ್ಲಿ ಹೊಸ ಕ್ರೀಡಾಂಗಣ ನಿರ್ಮಾಣ ಮಾಡಲು ಪರಿಶೀಲನೆಯಲ್ಲಿದೆ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಉತ್ತರವನ್ನು ಒದಗಿಸಿದ್ದೇವೆಂದು ಹೇಳಿದ್ದಾರೆ. ಇವರು ಉತ್ತರದಲ್ಲಿ 21.30 ಕೋಟಿ ರೂಪಾಯಿಗಳನ್ನು ಪ್ರಸಕ್ತ ಸಾಲಿನಲ್ಲಿ ಕ್ರೀಡಾಂಗಣ ಕಾಮಗಾರಿಗೆ 12ನೇ ಹಣಕಾಸು ಆಯೋಗದ ಅನುದಾನದಿಂದ ಒದಗಿಸಿದ್ದೇವೆಂಬ ಮಾತನ್ನು ಹೇಳಿದ್ದಾರೆ. ಇದರಲ್ಲಿ ರಾಜ್ಯದ ಎಷ್ಟು ಜಿಲ್ಲೆಗಳಿಗೆ ಕೊಟ್ಟಿದ್ದೀರೆಂದು ಕೇಳಿರುವುದಕ್ಕೆ ಜಿಲ್ಲಾ ಮಟ್ಟದಲ್ಲಿ ಯಾವುದಕ್ಕೂ ಕೊಟ್ಟಿರುವುದಿಲ್ಲ. 63 ತಾಲ್ಲೂಕು ಮಟ್ಟದ ಕ್ರೀಡಾಂಗಣಗಳ ನಿರ್ಮಾಣದ ಕಾಮಗಾರಿಗಳಿಗೆ ಕೊಟ್ಟಿದ್ದೇವೆಂದು ಉತ್ತರವನ್ನು ಕೊಟ್ಟಿದ್ದಾರೆ. ನಾನು ಈಗಾಗಲೇ ನಿರ್ಮಾಣಗೊಂಡಿರುವಂತಹ ಕ್ರೀಡಾಂಗಣಗಳ ನಿರ್ವಹಣೆಗೆ ಏನಾದರೂ ವಾರ್ಷಿಕ ವೆಚ್ಚವೆಂದು ತೆಗೆದು ಇಟ್ಟಿದ್ದೀರಾ? ನಿರ್ವಹಣೆಯನ್ನು ಯಾವ ರೀತಿಯಾಗಿ ಮಾಡುತ್ತಿದ್ದೀರಿ? ನಿರ್ಮಾಣ ಮಾಡಿರುವಂತಹ ಕ್ರೀಡಾಂಗಣಗಳು ಯಾವ ದುಃಸ್ಥಿತಿಯಲ್ಲಿ ಇದ್ದಾವೆ? ಕ್ರೀಡಾ ಪಟುಗಳು ಅಲ್ಲಿ ಕ್ರೀಡೆ ಆಡಲು ಪ್ರೋತ್ಸಾಹದಾಯಕವಾದ ಸ್ಥಿತಿಯಲ್ಲಿ ಇದೆಯಾ? ಮತ್ತೆ ಕ್ರೀಡಾ ಹಾಸ್ಟೆಲ್‌ಗಳ ಪರಿಸ್ಥಿತಿ ಹೇಗೆ ಇದೆಯೆಂಬ ಬಗ್ಗೆ, ನಾನು ತಮ್ಮ ಮೂಲಕ ಮಾನ್ಯ ಮಂತ್ರಿಯವರಲ್ಲಿ ಕೇಳಲಿಚ್ಛಿಸುತ್ತೇನೆ.

ಶ್ರೀ ಆಲ್ಕೋಡ್ ಹನುಮಂತಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗಳಿಗೆ ನಾನು ಸರಿಯಾದಂತಹ ಉತ್ತರಗಳನ್ನು ಕೊಟ್ಟಿದ್ದೇನೆ. ಅವರು ಮತ್ತೆ ಉಪ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಅದು ವಸತಿ ನಿಲಯಗಳು ಹೇಗೆ ಇದೆ? ಅವುಗಳ ನಿರ್ವಹಣೆಯನ್ನು ಹೇಗೆ ಮಾಡುತ್ತೀರಿ? ಮತ್ತೆ ಈಗ ಇರುವಂತಹ ಕ್ರೀಡಾಪಟುಗಳಿಗೆ ಏನು ಸಹಾಯಧನವನ್ನು ಕೊಡುತ್ತೀರಾ? ಎಂಬ ಬಗ್ಗೆ ಉಪ ಪ್ರಶ್ನೆಗಳನ್ನು ಕೇಳಿದ್ದಾರೆ. ಅವರು ಆ ಪ್ರಶ್ನೆಗಳನ್ನು ಕಳುಹಿಸಿಕೊಡಲಿ, ನಾನು ಅದಕ್ಕೆ ಉತ್ತರವನ್ನು ಕೊಡುತ್ತೇನೆ. ಈಗ ಅವರಿಗೆ ಕೊಟ್ಟಿರುವಂತಹ ಉತ್ತರದಲ್ಲಿ 12ನೇ ಹಣಕಾಸು ಆಯೋಗದಲ್ಲಿ 21.30 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಅವರ ಗಮನಕ್ಕೆ ತಂದಿದ್ದೇನೆ. ಎರಡನೆಯದಾಗಿ ಈ ಸಾರಿ 63 ತಾಲ್ಲೂಕು ಮಟ್ಟದ ಕ್ರೀಡಾಂಗಣಗಳನ್ನು 12ನೇ ಹಣಕಾಸಿನ ಆಯೋಗದ ಅಡಿಯಲ್ಲಿ ತೆಗೆದುಕೊಳ್ಳಬೇಕೆಂಬ ಬಗ್ಗೆಯೂ ಉತ್ತರದಲ್ಲಿ ಹೇಳಿದ್ದೇನೆ. ಅವರು ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೊಸದಾಗಿ ಎಲ್ಲಿ ಹೊಸದಾಗಿ ಕ್ರೀಡಾಂಗಣವನ್ನು ತೆಗೆಯುತ್ತೀರಿ ಎಂದು ಕೇಳಿದ್ದಾರೆ. ಈಗಾಗಲೇ ತರೀಕೆರೆ, ಶೃಂಗೇರಿ, ಕೊಪ್ಪದಲ್ಲಿ ನಿವೇಶನದ ಕೊರತೆ ಇದೆ. ಅದರ ಬಗ್ಗೆ ಅವರು ಒದಗಿಸಿ ಕೊಡಲಿ, ಅದಕ್ಕೆ ನಾನು ಕೊಡುತ್ತೇನೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಮಂತ್ರಿಯವರು ಬರೀ ಶೃಂಗೇರಿ, ಕೊಪ್ಪದ ಬಗ್ಗೆ ಮಾತ್ರ ಹೇಳಿದರು. 1995ನೇ ಇಸವಿಯಿಂದ ಕಡೂರು ತಾಲ್ಲೂಕು ಸ್ಟೇಡಿಯಂ ಆಗಿಲ್ಲ, ಈಗಾಗಲೇ ಮೂರು ಸರ್ಕಾರಗಳು ಬಂದಿದೆ, ಐದು ಜನ ಮುಖ್ಯಮಂತ್ರಿಗಳು ಬಂದರು. ಮಾನ್ಯ ಆಲ್ಕೋಡ್ ಹನುಮಂತಪ್ಪನವರು 12ನೇ ಹಣಕಾಸಿನ ಆಯೋಗದಿಂದ ಹಣವನ್ನು ಕೊಡುವುದಾಗಿ ಹೇಳಿದ್ದಾರೆ, ಯಾವುದು ಶೇ.60, ಶೇ.70 ರಷ್ಟು ಕೆಲಸಗಳು ಆಗಿವೆ; ಅದನ್ನು ಪರಿಪೂರ್ಣ ಮಾಡುವುದರ ಬಗ್ಗೆ ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳಲಿ. ನಮ್ಮಲ್ಲಿ ಜಿಮ್‌ನಾಸಿಯಂ ಎಂದು ಕೊಟ್ಟಿದ್ದಾರೆ. ಅದು ಇನ್ನು ಪೂರ್ಣ ಆಗಿಲ್ಲ. ಈ ರೀತಿ ಪೂರ್ಣವಾಗದೆ ಇರುವಂಥಾದ್ದನ್ನು 12ನೇ ಹಣಕಾಸು ಆಯೋಗದಿಂದಲೋ ಇಲ್ಲವೆಂದರೆ ವರ್ಲ್ಡ್ ಬ್ಯಾಂಕ್‌ನಿಂದಲೊ, ಹಣ ತೆಗೆದುಕೊಂಡು ಬಂದು ಪೂರ್ಣಮಾಡಿ. ಈಗ ನಮ್ಮ ದೇಶದಲ್ಲಿ ಏನು ಆಗಿದೆಯೆಂದರೆ ಎಲ್ಲಕ್ಕೂ ಆದ್ಯತೆ ಇದೆ, ಆದರೆ ಕ್ರೀಡೆಗೆ ಆದ್ಯತೆಯನ್ನು ಕೊಡುತ್ತಿಲ್ಲ. ಮಾನ್ಯ ಆಲ್ಕೋಡ್ ಹನುಮಂತಪ್ಪನವರು ಯುವಕರು ಇದ್ದಾರೆ. ಅದರ ಬಗ್ಗೆ ಮಾನ್ಯ ಮಂತ್ರಿಯವರಿಗೆ ಮತ್ತು ಹಣಕಾಸು ಸಚಿವರಿಗೆ, ತಿಳಿಸಬೇಕು.

ಅಧ್ಯಕ್ಷರು : ಆಯಿತು, ಈಗ ಮಾನ್ಯ ಮಂತ್ರಿಯವರು ಉತ್ತರವನ್ನು ಹೇಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ನೀವು ನಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲವೆಂದು ಸಮಸ್ಯೆ ಬಗೆಹರಿಯುವುದು ಹೇಗೆ? ನಾನು ಮತ್ತು ಮಾನ್ಯ ಸಿ.ಟಿ. ರವಿಯವರು ಪ್ರಸ್ತಾಪ ಮಾಡಿರುವಂತಹ ವಿಚಾರ ನಮ್ಮ ಜಿಲ್ಲೆಗೆ ಸಂಬಂಧಪಟ್ಟಿದೆ. ತಾವು ನಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡದಿದ್ದರೆ ಹೇಗೆ?

ಅಧ್ಯಕ್ಷರು : ಕೇಳಿ, ಉಪ ಪ್ರಶ್ನೆಯನ್ನು ಕೇಳಿ. ನೀವು ಮಾತನಾಡುವುದಕ್ಕೆ 10 ನಿಮಿಷಗಳ ಕಾಲವನ್ನು ತೆಗೆದು ಕೊಂಡರೆ ಹೇಗೆ?

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ತಾವು ನಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡದಿದ್ದರೆ, ಈ ರೀತಿ ಮಂತ್ರಿಗಳೆ ಕೊಡುವ ಉತ್ತರವನ್ನು ಕೇಳುವುದೇ ಆದರೆ ನಾವು ಸುಮ್ಮನೆ ಕುಳಿತುಕೊಳ್ಳಬೇಕಾ? ಸಮಸ್ಯೆ ಬಗೆಹರಿಯುವುದು ಹೇಗೆ?

ಅಧ್ಯಕ್ಷರು : ಮಾನ್ಯ ಕೆ.ಎಂ. ಕೃಷ್ಣಮೂರ್ತಿಯವರೆ, ತಾವು ಹಿರಿಯ ಸದಸ್ಯರು. ಇಲ್ಲಿ ಒಂದು ಗಂಟೆಯೊಳಗೆ ಪ್ರಶ್ನೋತ್ತರವನ್ನು ಮುಗಿಸಬೇಕು. ಆ ರೀತಿ ಎಂದರೆ ಒಂದು ಪ್ರಶ್ನೆಗೆ ಐದು ನಿಮಿಷಗಳ ಕಾಲಾವಕಾಶ ಇರುತ್ತದೆ. ಇಲ್ಲಿ ಏನಾಗಿದೆಯೆಂದರೆ ನೀವು ಮಾತನಾಡುವುದಕ್ಕೆ 5 ನಿಮಿಷವನ್ನು ಕಳೆದುಬಿಟ್ಟರೆ, ಹೇಗೆ ಉತ್ತರವನ್ನು ಕೊಡುವುದು? ಪ್ರಶ್ನೋತ್ತರವನ್ನು ಮುಗಿಸುವುದು ಹೇಗೆ? ತಾವು ಹಿರಿಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ನಮ್ಮ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದು ಹೇಗೆ? ನಮಗೂ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು : ಪ್ರಶ್ನೆಯನ್ನು ಕೇಳಿ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ಮೂಡಿಗೆರೆ, ಕಡೂರು, ಎನ್.ಆರ್. ಪುರ ತಾಲ್ಲೂಕುಗಳ ಕ್ರೀಡಾಂಗಣಗಳ ಕಾಮಗಾರಿಗಳು ಪೂರ್ಣಗೊಂಡಿದೆಯೆಂದು ಹೇಳಿದ್ದಾರೆ. ಈಗ ಹಿರಿಯ ಸದಸ್ಯರು 1995ನೇ ಇಸವಿಯಿಂದ ಇವತ್ತಿನವರೆಗೂ ಪೂರ್ಣಗೊಂಡಿಲ್ಲವೆಂದು ತಿಳಿಸಿದ್ದಾರೆ. ಇದರಲ್ಲಿ ಯಾವುದು ಸರಿಯೆಂದು ತೀರ್ಮಾನ ಆಗಬೇಕು. ಇಲ್ಲಿ ಮಾನ್ಯ ಸಚಿವರು ಕೊಟ್ಟಂಥ ಉತ್ತರ ಸರಿಯೋ: ಇಲ್ಲ, ನಮ್ಮ ಹಿರಿಯ ಸದಸ್ಯರಾದ ಶ್ರೀ ಕೆ.ಎಂ. ಕೃಷ್ಣಮೂರ್ತಿಯವರು ಪ್ರಸ್ತಾಪ ಮಾಡಿರುವಂತಹ ಪ್ರಶ್ನೆ ಸರಿ ಇದೆಯೇ ಎಂಬುದು ಕ್ಲಾರಿಫೈ ಆಗಬೇಕು; ಅಥವಾ ಇಲ್ಲಿ ಮಾನ್ಯ ಮಂತ್ರಿಯವರ ದಿಕ್ಕು ತಪ್ಪಿಸಲು ಅಧಿಕಾರಿಗಳು ಅಪೂರ್ಣವಾದ ಮಾಹಿತಿಯನ್ನು ಕೊಟ್ಟು, ಪೂರ್ಣಗೊಂಡಿದೆಯೆಂಬ ಉತ್ತರವನ್ನು ಮಾನ್ಯ ಮಂತ್ರಿಯವರ ಮೂಲಕ ಹೇಳಿಸುತ್ತಿದ್ದಾರಾ?

ಶ್ರೀ ಆಲ್ಕೋಡ್ ಹನುಮಂತಪ್ಪ : ಮಾನ್ಯ ಸದಸ್ಯರಾದ ಕಡೂರು ಕೃಷ್ಣಮೂರ್ತಿಯವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಕಡೂರು ಕ್ಷೇತ್ರದಲ್ಲಿ ಕ್ರೀಡಾಂಗಣ ಕಾಮಗಾರಿಯನ್ನು ಪ್ರಾರಂಭ ಮಾಡಿ ಬಹಳ ದಿವಸವಾಗಿದ್ದು, ಅದು ಮುಗಿದಿಲ್ಲ ಎಂದು ಹೇಳುತ್ತಿದ್ದಾರೆ. ಈ ಹಿಂದೆ ಅದಕ್ಕೆ 21.55 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಆ ಕ್ರೀಡಾಂಗಣ ಈಗಾಗಲೇ ಪೂರ್ಣಗೊಂಡಿದೆ ಎನ್ನುವ ಬಗ್ಗೆ ನನ್ನ ಹತ್ತಿರ ಮಾಹಿತಿ ಇದೆ. ಇದು ಮುಗಿದಿಲ್ಲ ಎಂದು ಅವರು ಹೇಳುತ್ತಿದ್ದು, ಅದರ ಬಗ್ಗೆ ನನಗೆ ವಿವರಗಳನ್ನು ತಿಳಿಸಿದರೆ, ಅದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮುಂದಿನ ವಾರ ನಾನು ಅದರ ಫೋಟೋ ತಂದು ಕೊಡುತ್ತೇನೆ.

ಶ್ರೀ ಆಲ್ಕೋಡ್ ಹನುಮಂತಪ್ಪ : ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ವಿಷಯ : ಹೊಸನಗರ ತಾಲ್ಲೂಕಿನ ಪಟಗುಪ್ಪ ಸೇತುವೆ ನಿರ್ಮಾಣ ಕೈಗೊಳ್ಳದಿರುವುದು.

214(981) ಶ್ರೀ ಹಾಲಪ್ಪ ಹೆಚ್. (ಹೊಸನಗರ) : ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೊಸನಗರ ತಾಲ್ಲೂಕು ಪಟಗುಪ್ಪ ಸೇತುವೆಗೆ ಕೆ.ಆರ್.ಡಿ.ಸಿ.ಎಲ್.ನಿಂದ ಹಣ ಮಂಜೂರಾಗಿದ್ದರೂ ನಿರ್ಮಾಣ ಕಾಮಗಾರಿಗಳನ್ನು ಇದುವರೆವಿಗೂ ಕೈಗೊಳ್ಳದಿರಲು ಕಾರಣವೇನು;

ಆ) ಯಾವಾಗ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು) :

ಅ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ತೆಗೆದುಕೊಂಡ 2ನೇ ಹಂತದ ಸೇತುವೆ ನಿರ್ಮಾಣ ಯೋಜನೆಯ ಅಡಿಯಲ್ಲಿ ಹೊಸನಗರ ತಾಲ್ಲೂಕಿನ ಪಟಗುಪ್ಪ ಸೇತುವೆ ನಿರ್ಮಾಣವು ಕೂಡ ಸೇರಿರುತ್ತದೆ. ಈ ಸೇತುವೆಗೆ ತಗಲುವ ರೇಖಾ ಅಂದಾಜು ವೆಚ್ಚ ರೂ. 3.00 ಕೋಟಿಗಳೆಂದು ಅಂದಾಜಿಸಲಾಗಿತ್ತು.

ಆದರೆ ಈ ಸೇತುವೆಯ ಸ್ಥಳ ಪರೀಕ್ಷೆ ಹಾಗೂ ವಿವರವಾದ ಸ್ಥಳ ಪರಿಶೋಧನೆ ನಡೆಸಿದಾಗ ಈ ಸೇತುವೆಯು ಲಿಂಗನಮಕ್ಕಿ ಜಲಾಶಯದ ಹಿನ್ನೀರಿನಲ್ಲಿ ಬರುತ್ತದೆ ಮತ್ತು ಸೇತುವೆ ಸ್ಥಳದಲ್ಲಿನ ಎರಡು ದಡದ ಮಧ್ಯದ ಒಟ್ಟು ಉದ್ದವು ಸುಮಾರು 900.00 ಮೀ.ಗಳಷ್ಟು ಆಗುತ್ತದೆ. ಈ ಸ್ಥಳದಲ್ಲಿ 200 ಮೀ. ಉದ್ದದ ಸೇತುವೆಯನ್ನಲ್ಲದೇ ಎರಡು ಬದಿಯಲ್ಲಿ ಒಟ್ಟು 700 ಮೀ. ಉದ್ದದ ಕೂಡು ರಸ್ತೆಯನ್ನು ಸಹಾ ನಿರ್ಮಿಸಬೇಕಾಗುತ್ತದೆ. ಸೇತುವೆ